**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**

ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक–संस्कृत–विश्वविद्यालय:**

श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

**ಪ್ರಸ್ತಾವನೆ:**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಚತುರ್ಥ ದೀಕ್ಷಾಂತ ಘಟಿಕೋತ್ಸವವನ್ನು ನಡೆಸಲು ನಿಶ್ಚಯಿಸಲಾಗಿದೆ. ದಿನಾಂಕ: 30.05.2015 ರಂದು ನಡೆದ 26ನೇ ಪ್ರಶಾಸನ ಸಮಿತಿ ಸಭೆಯು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಚತುರ್ಥ ದೀಕ್ಷಾಂತ ಘಟಿಕೋತ್ಸವವನ್ನು ಆಯೋಜಿಸಲು ನಿರ್ಣಯಿಸಲಾಗಿದೆ. 2013–14ನೇ ಸಾಲಿನಲ್ಲಿ ಆಯಾಯ ಶಾಸ್ತ್ರಗಳಲ್ಲಿ ಸರ್ವೋನ್ನತ ಶ್ರೇಣಿ ಪಡೆದ ವಿದ್ಯಾರ್ಥಿಗಳನ್ನು ಪುರಸ್ಕರಿಸಿ, ವಿದ್ವನ್ಮಧ್ಯಮಾ (ಬಿ.ಎ)/ ಸಂಸ್ಕೃತ/ ವೇದ ಅಂತಿಮ ವರ್ಷದಲ್ಲಿ ತೇರ್ಗಡೆಯಾದ , ವಿದ್ವದುತ್ತಮಾ (ಎಂ.ಎ) ಸಂಸ್ಕೃತ/ ವೇದ ಅಂತಿಮ ವರ್ಷದಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು ಹಾಗೂ ಎಂ.ಫಿಲ್(ವಿಶಿಷ್ಟಾಚಾರ್ಯ) ವಿದ್ಯಾರ್ಥಿಗಳಿಗೆ ಪದವಿಪ್ರಮಾಣ ಪತ್ರಪ್ರದಾನ ಮಾಡಲು ಕ್ರಮವಹಿಸಬೇಕಾಗಿದೆ. 2013–14ನೇ ಸಾಲಿನ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಘಟಿಕೋತ್ಸವ ಪ್ರಮಾಣಪತ್ರವನ್ನು ನೀಡಬೇಕಾದ ಹಿನ್ನೆಲೆಯಲ್ಲಿ ಈ ಅಧಿಸೂಚನೆಯನ್ನು ಹೊರಡಿಸಿದೆ.

## ಅಧಿಸೂಚನೆ

**ಸಂಖ್ಯೆ: ಕಸಂವಿ/ಚ.ದೀ.,ಘ/2014–15** **ದಿನಾಂಕ: 10–08–2015**

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಚತುರ್ಥ ದೀಕ್ಷಾಂತ ಘಟಿಕೋತ್ಸವವನ್ನು ನಡೆಸಲು ನಿಶ್ಚಯಿಸಲಾಗಿದೆ. ಆದಕಾರಣ 2013–14ನೇ ಸಾಲಿನಲ್ಲಿ ವಿದ್ವನ್ಮಧ್ಯಮಾ (ಬಿ.ಎ)/ ಸಂಸ್ಕೃತ/ ವೇದ ಅಂತಿಮ ವರ್ಷದಲ್ಲಿ ತೇರ್ಗಡೆಯಾದ , ವಿದ್ವದುತ್ತಮಾ (ಎಂ.ಎ) ಸಂಸ್ಕೃತ/ ವೇದ ಅಂತಿಮ ವರ್ಷದಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು ಹಾಗೂ ಎಂ.ಫಿಲ್(ವಿಶಿಷ್ಟಾಚಾರ್ಯ) ಪದವಿ ಪಡೆದ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದಿಂದಾಗಲೀ, ಕಾಲೇಜಿನ ಪ್ರಾಚಾರ್ಯರಿಂದಾಗಲೀ ಅಥವಾ ವೆಬ್ ಸೈಟ್ ನಿಂದಾಗಲೀ ಅರ್ಜಿಯನ್ನು ಪಡೆದು 500.ರೂಗಳ ನಿಗದಿತ ಶುಲ್ಕವನ್ನು ಡಿ.ಡಿರೂಪದಲ್ಲಿ ಹಾಗೂ ಭರ್ತಿಮಾಡಿದ ಅರ್ಜಿಯನ್ನು ತಮ್ಮ ಕಾಲೇಜಿನ ಮುಖಾಂತರ ಆಗಸ್ಟ್ 25 ರ ಒಳಗೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಈ ಮೂಲಕ ಸೂಚಿಸಿದೆ.

**ಆದೇಶದ ಮೇರೆಗೆ,** **ಸಹಿ**

**ಕುಲಸಚಿವರು**

**ಪ್ರತಿಗಳು:**

1. **ರಾಜ್ಯದ ಎಲ್ಲಾ ಸಂಸ್ಕೃತ ಕಾಲೇಜುಗಳ ಪ್ರಾಚಾರ್ಯರಿಗೆ,**
2. **ರಕ್ಷತಾ ಪ್ರತಿ**

# ಕಸಂವಿ/01/ಚ.ದೀ.ಘಟಿಕೋತ್ಸವ/2014–15

# ಕಸಂವಿ/01/ಪ.ಅ/2015–16

# ಅಧಿಸೂಚನೆ

# ಪ್ರಶ್ನಪತ್ರಿಕಾ ತಯಾರಿಕೆ

# 2015–16